ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು) —

ಅ) ಕಾಲೇಜು ಶಿಕ್ಷಣ ಇಲಾಖೆಯಲ್ಲಿರುವ ಕಾಲೇಜುಗಳು ಹಾಗೂ ಕಿರಿಯ ಕಾಲೇಜುಗಳಲ್ಲಿ ೬೯ ದೈಹಿಕ ಶಿಕ್ಷಕ ಹುದ್ದೆಗಳು ಖಾಲಿ ಇವೆ.

ಆ) ೨೨೮ (ಕರ್ನಾಟಕ ವಿಶ್ವವಿದ್ಯಾಲಯ ಮತ್ತು ಬೆಂಗಳೂರು ವಿಶ್ವವಿದ್ಯಾಲಯ)

ಇ) ಆದಷ್ಟು ಶೀಘ್ರವಾಗಿ

ಮಂಡಲ್ ಪಂಚಾಯತ್ ಜಿಲ್ಲಾ ಪರಿಷತ್ ಚುನಾವಣೆ

೪೯೮. ಶ್ರೀ ಜಿ.ಎಸ್. ಆಚಾರ್ (ಬೈಂದೂರು).—ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಹಾಗೂ ಪಕ್ಸ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಮಂಡಲ್ ಪಂಚಾಯಿತ್‌ಗಳಿಗೆ ಹಾಗೂ ಜಿಲ್ಲಾ ಪರಿಷತ್ತುಗಳಿಗೆ ಯಾವಾಗ ಚುನಾವಣೆ ನಡೆಸಲಾಗುವುದು ?

ಆ) ವಿಳಂಬಕ್ಕೆ ಕಾರಣವೇನು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)—

ಅ) ಕಾಯ್ದೆಯಲ್ಲಿ ಅಡಕವಾಗಿರುವ ಕಲವೊಂಗಳ ರೀತ್ಯಾ ಚುನಾವಣೆಗಳ ಪೂರ್ವಭಾವಿ ಸಿದ್ಧತೆಗಳು ಭರದಿಂದ ಸಾಗಿವೆ. ಪೂರ್ವಭಾವಿ ಸಿದ್ಧತೆಗಳು ಮುಂಗಿದ ಮೇಲೆ ಮಂತ್ರಿಮಂಡಲ ಚುನಾವಣೆಯ ದಿನಾಂಕ ಗೊತ್ತುಪಡಿಸುವುದು.

ಆ) 'ಅ'ನಲ್ಲಿ ಉತ್ತರಿಸಲಾಗಿದೆ.

ರಾಜ್ಯಪತ್ರ (ಗೆಜೆಟ್) ತಡವಾಗಿ ತಲುಪುವ ಬಗ್ಗೆ

೫೧೯. ಶ್ರೀ ಕೆ. ಕುಶಾಲ (ಸುಳ್ಯ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ.—

ಅ) ಕರ್ನಾಟಕ ರಾಜ್ಯ ಪತ್ರ (ಗೆಜೆಟ್) ಪ್ರಕಟಣೆ ದಿನಾಂಕ ಹಾಗೂ ಕಡೇ ದಿನ ಅವಧಿ ಮುಗಿದು ೨-೩ ತಿಂಗಳ ನಂತರ ತಲುಪುವುದು. ಇದರಿಂದ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ,

ಆ) ಹಾಗಿದ್ದಲ್ಲಿ ಆ ಬಗ್ಗೆ ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).—

ಅ) ಬಂದಿದೆ

ಆ) ಈ ರೀತಿಯ ತಡವಾಗದಂತೆ ಈಗಾಗಲೇ ಸೂಕ್ತ ಕ್ರಮ ಕೈಗೊಳ್ಳಲಾಗಿದೆ ಹಾಗೂ ಡಿಸೆಂಬರ್ ೮೫ ರಿಂದ ಮೊದಲ್ಗೊಂಡು ಈ ತಹಲ್‌ವರೆಗೆ ಎಲ್ಲಾ ರಾಜ್ಯ ಪತ್ರಗಳು ಸಕಾಲದಲ್ಲಿ ಪ್ರಕಟವಾಗಿವೆ.

ಶಿಕಾರಿಪುರದ ಸರಕಾರಿ ಕಾಲೇಜು ಕಟ್ಟಡದ ಬಗ್ಗೆ

೨೭೧. ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಕಳೆದ ೧೦ ವರ್ಷಗಳಿಂದ ಶಿಕಾರಿಪುರ ಸರ್ಕಾರಿ ಕಿರಿಯ ಕಾಲೇಜಿನಲ್ಲಿ ಶಾಲೆ ನಡೆಸಲು ಕೊಠಡಿಗಳಿಲ್ಲದೆ ಕಳೆದ ೨ ವರ್ಷಗಳಿಂದಲೂ ಕೊಠಡಿ ಕಟ್ಟಿಸಲು ಲೋಕೋಪಯೋಗಿ ಇಲಾಖೆಗೆ ನಕ್ಷೆ ಮತ್ತು ಅಂದಾಜು ಪಟ್ಟಿ ತಯಾರಿಸಲು ತಿಳಿಸಲಾಗಿದೆ ಮತ್ತು ಕೊಠಡಿಗಳನ್ನು ಕಟ್ಟಲಾಗುತ್ತೆ ಎಂದು ಸರ್ಕಾರದವರು ಆಶ್ವಾಸನೆ ನೀಡಿರುವುದು ನಿಜವೆ ?

ಆ) ಈ ವರ್ಷವಾದರೂ ಅಲ್ಲಿಯ ವಿದ್ಯಾರ್ಥಿಗಳ ತೊಂದರೆಯನ್ನು ಪರಿಹರಿಸಿ ಕಟ್ಟಡದ ಕೆಲಸ ಪ್ರಾರಂಭಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೆ ?